ಕಳಪೆಗಳನ್ನು ಗುರುತಿಸುವ ಹೊಣೆಗಾರಿಕೆಯನ್ನು ಸಾಹಿತ್ಯ ವಿಮರ್ಶೆ ನಿರ್ವಹಿಸುವುದು. ಇದು ತನ್ನ ನಿಷ್ಠುರತೆ ಕಳೆದುಕೊಳ್ಳುವುದು ಸಮಾಜದಲ್ಲಿರುವ ಮೌಲ್ಯಮಾಪಕ ಪ್ರಜ್ಞೆಯ ಪತನದ ಸೂಚನೆಯಾಗಿರುತ್ತದೆ. ಇಲ್ಲಿಯೇ ಸಾಹಿತ್ಯದಲ್ಲಿ ಶ್ರೇಷ್ಠತೆಯ ಸ್ವರೂಪವನ್ನು ಚರ್ಚಿಸುವ ಸಲುವಾಗಿಯೇ ಅಡಿಗರ ಅಧ್ಯಕ್ಷತೆಯಲ್ಲಿ 'ಜಾಗೃತ ಸಾಹಿತ್ಯ ಸಮಾವೇಶ' (1990) ಏರ್ಪಟ್ಟಿದ್ದನ್ನು ಸ್ಮರಿಸಬಹುದು. ಆದರೆ, ಶ್ರೇಷ್ಠತೆಯ ಹುಡುಕಾಟವು ವ್ಯಸನವಾದರೆ ಯಾವ ಅಪಾಯದ ಅಂಚಿಗೆ ಹೋಗಬಹುದು ಎಂಬ ಚಿಂತನೆಯೂ ಅಲ್ಲಿ ನಡೆಯಿತು.

ಟೊಳ್ಳು–ಗಟ್ಟಿಗಳ ಹುಡುಕಾಟವು, ಸಾಹಿತ್ಯ ಕ್ಷೇತ್ರಕ್ಕಿಂತ ಬಿರುಸಾಗಿ ದರ್ಶನ, ಧರ್ಮ, ಸಂಸ್ಕೃತಿ, ಭಾಷೆ, ಶಿಕ್ಷಣ ಕ್ಷೇತ್ರಗಳಲ್ಲಿ ಜರುಗುತ್ತದೆ. 'ಕವಿರಾಜಮಾರ್ಗ' ಕಾಲದಿಂದ ಕರ್ನಾಟಕದಲ್ಲಿ ಜೀವನಮೌಲ್ಯಗಳ ವಿಷಯದಲ್ಲಿ ಹುಡುಕಾಟ ನಡೆದಿದೆ. ಕನ್ನಡದಲ್ಲಿ ರಾಗಿ–ಭತ್ತಗಳನ್ನು ಶೂದ್ರ–ಬ್ರಾಹ್ಮಣ್ಯದ ಪ್ರತೀಕಗಳನ್ನಾಗಿಸಿ ಯಾವುದು ಗಟ್ಟಿ ಎಂದು 'ರಾಮಧಾನ್ಯ ಚರಿತೆ'ಯು ಪರಿಶೀಲಿಸುವಾಗ, ಅದರ ಮುಂದಿದ್ದುದು ಕೇವಲ ಆಹಾರದ ವಿಷಯವಲ್ಲ. ಸಾಂಸ್ಕೃತಿಕ ಆಯ್ಕೆ; ಇದರಂತೆ ಶಿಕ್ಷಣದಲ್ಲಿ ಯಾವ ಮಾದರಿ ಉತ್ತಮ ಎಂಬ ವಿವೇಚನೆಯನ್ನು ಕೈಲಾಸಂ ಅವರ ನಾಟಕ 'ಟೊಳ್ಳು–ಗಟ್ಟಿ' ಮಾಡಿತು. ಅಂಬೇಡ್ಕರ್ ಅವರು ಹಿಂದೂ ಧರ್ಮ ತ್ಯಜಿಸುವಲ್ಲೂ, ಇಸ್ಲಾಂ, ಕ್ರೈಸ್ತ, ಸಿಖ್ ಧರ್ಮಗಳನ್ನು ಪರ್ಯಾಯವೆಂದು ಒಪ್ಪದಿರುವಲ್ಲೂ, ಧಮ್ಮವನ್ನು ಸ್ವೀಕರಿಸುವಲ್ಲೂ ಇಂತಹುದೇ ಮೌಲ್ಯಮಾಪಕ ಹುಡುಕಾಟ ನಡೆಸಿದರು. ಬಿಬಿಯವರು ಕೂಡ ಬೂಸಾ ಹೇಳಿಕೆಗೆ ತಾರ್ಕಿಕ ಅಂತ್ಯ ಕೊಡುವಂತೆ ಕೊನೆಯ ದಿನಗಳಲ್ಲಿ ಬೌದ್ಧ ಧಮ್ಮದೀಕ್ಷೆ ಸ್ವೀಕರಿಸಿದರು.



ಅಧಿಕಾರಸ್ಥರೇ ಸೋತವರ ಸಂಸ್ಕೃತಿಯನ್ನು ಮೌಲ್ಯಮಾಪನ ಮಾಡುವಾಗ ಈ ಸಮಸ್ಯೆ ಬೇರೆ ರೂಪಧಾರಣೆ ಮಾಡುತ್ತದೆ. ಯೂರೋಪಿನ ಉತ್ತಮ ಸಾಹಿತ್ಯದ ಒಂದು ಕಪಾಟು ಪುಸ್ತಕಗಳಿಗೆ ಇಡೀ ಭಾರತದ ಮತ್ತು ಅರಬಸ್ಥಾನದ ಸಾಹಿತ್ಯವು ಸಮ ಎಂದು ತೀರ್ಪು ಕೊಡುವಾಗ, ಮೆಕಾಲೆಯು ಉಳಿದದ್ದೆಲ್ಲ ಬೂಸಾ ಎಂದು ಹೇಳುವ ಅಹಂಕಾರವನ್ನೇ ತೋರಿದನು. ಇಂತಹ ಧಾರ್ಷ್ಟ್ಯವಿರದ ಮತ್ತು ಕನ್ನಡ ಸಾಹಿತ್ಯವನ್ನು ಬಲ್ಲವರಾಗಿದ್ದ ಇ.ಪಿ. ರೈಸ್, ಪ್ರಾಚೀನ ಕನ್ನಡ ಸಾಹಿತ್ಯ ಕುರಿತು ಬರೆಯುತ್ತ, ಇಲ್ಲಿ ನಾಗರಿಕ ಸಮಾಜಕ್ಕೆ ಸೇರಿಸಬಲ್ಲ ಘನತರವಾದ ದರ್ಶನಗಳ ಪ್ರಮಾಣ ಕಡಿಮೆ ಎಂದು ಟಿಪ್ಪಣಿ ಮಾಡಿದರು. ರೈಸರ ಪ್ರತಿಕ್ರಿಯೆಯಲ್ಲಿ ಕೆಲಮಟ್ಟಿಗೆ ಸತ್ಯವಿರಬಹುದು. ಆದರೂ ಅಲ್ಲಿ ಅಧಿಕಾರಸ್ಥರು ಸೋತ ದೇಶದ ಸಂಸ್ಕೃತಿಯನ್ನು ಮೌಲ್ಯಮಾಪನ ಮಾಡುವಾಗ ತೋರುವ ಸಾಂಸ್ಕೃತಿಕ ಯಜಮಾನಿಕೆಯ ಅಂಶ ಅಡಗಿರುವುದನ್ನು ಮರೆವಂತಿಲ್ಲ.